KAMS610059472021

# 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯ, ಪಿರಿಯಾಪಟ್ಟಣ

**ಉಪಸ್ಥಿತಿಃ**

**ಶ್ರೀಮತಿ. ಶ್ವೇತ.ಜೆ.,** *ಬಿ.ಕಾಂ., ಎಲ್.ಎಲ್.ಬಿ.,*

**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.,**

**ಸಿ.ಸಿ.ಸಂಖ್ಯೆ.3731/2021**

**ದಿನಾಂಕ 2 ನೇ ಏಪ್ರಿಲ್ ಮಾಹೆ 2026**

**ಪಿರ್ಯಾದಿದಾರರು :** ಸರ್ಕಾರದ ಪರವಾಗಿ ಅಬಕಾರಿ ನಿರೀಕ್ಷಕರು
ಹುಣಸೂರು ಉಪ ವಿಭಾಗ, ಹುಣಸೂರು
(ಸಹಾಯಕ ಸರ್ಕಾರಿ ಅಭಿಯೋಜಕರು)

**-ವಿರುದ್ದ-**

**ಆರೋಪಿ** : ರಾಜ ಬಿನ್ ಸಕಲಾರಾಧ್ಯ,
ವಯಸ್ಸು 40 ವರ್ಷ,
ವಾಸ. ಹರಳಹಳ್ಳಿ ಗ್ರಾಮ,
ರಾವಂದೂರು ಹೋಬಳಿ,
ಪಿರಿಯಾಪಟ್ಟಣ ತಾಲ್ಲೂಕು.
ಮೈಸೂರು ಜಿಲ್ಲೆ.
(ಆರೋಪಿ ಪರ ಶ್ರೀ ಸಿ.ಜಿ., ವಕೀಲರು)

| | |
|---|---|
| ಕೃತ್ಯ ನಡೆದ ದಿನಾಂಕ | 28.09.2021 |
| ಕೃತ್ಯ ವರದಿ ಮಾಡಿದ ದಿನಾಂಕ | 28.09.2021 |
| ದೂರುದಾರರ ಹೆಸರು | ಶ್ರೀಮತಿ ಸುಧಾಮಣಿ.ಎ. |

| | |
|---|---|
| ಸಾಕ್ಷಿದಾರರ ಹೇಳಿಕೆಯ ದಿನಾಂಕ | 11.12.2023 |
| ಸಾಕ್ಷಿದಾರರ ಹೇಳಿಕೆಯ ಮುಕ್ತಾಯವಾದ ದಿನಾಂಕ | 28.05.2025 |
| ಆಪಾದಿಸಲಾದ ಕಲಂಗಳು | ಕರ್ನಾಟಕ ಅಬಕಾರಿ ಕಾಯ್ದೆ ಕಲಂ.11, 13(1)(ಎ), 14, 32(1), 38(ಎ), ಮತ್ತು 43(ಎ) |
| ನ್ಯಾಯಾಧೀಶರ ತೀರ್ಮಾನ | ಬಿಡುಗಡೆಗೊಳಿಸಲಾಗಿದೆ |
| ಆರೋಪಿಗಳನ್ನು ಪ್ರತಿನಿಧಿಸುವ ವಕೀಲರು | ಶ್ರೀ ಸಿ.ಜಿ. ವಕೀಲರು |

**(ಶ್ವೇತ.ಜೆ)**
**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,**
**ಪಿರಿಯಾಪಟ್ಟಣ.**

**-: ತೀರ್ಪು:-**

ಅಬಕಾರಿ ನಿರೀಕ್ಷಕರು, ಹುಣಸೂರು ಉಪ ವಿಭಾಗ, ಹುಣಸೂರು, ಇವರು ಆರೋಪಿ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.11, 13(1)(ಎ), 14, 32(1), 38(ಎ), ಮತ್ತು 43(ಎ) ಅಡಿಗಳಲ್ಲಿ ಶಿಕ್ಷಿಸಬಹುದಾದ ಅಪರಾಧಗಳನ್ನು ಎಸಗಿರುತ್ತಾರೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಮಾನ್ಯ ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ತಿರುಳು ಈ ಕೆಳಗಿನಂತಿದೆ.**

ದಿನಾಂಕ 28.09.2021 ರಂದು ಬೆಳಿಗ್ಗೆ 6.30 ಗಂಟೆ ಸಮಯದಲ್ಲಿ ಪಿರಿಯಾಪಟ್ಟಣ ಠಾಣಾ ಸರಹದ್ದು, ರಾವಂದೂರು ಗ್ರಾಮದಲ್ಲಿ ಆರೋಪಿಯು TVS XL100 HEAVY DUTY ದ್ವಿಚಕ್ರ ವಾಹನದಲ್ಲಿ ಎರಡು ರಟ್ಟಿನ

ಪೆಟ್ಟಿಗೆಯಲ್ಲಿ ತಲಾ 96 ರಂತೆ ಒಟ್ಟು 192 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಮದ್ಯ ತುಂಬಿದ ಟೆಟ್ರಾ ಪ್ಯಾಕ್ ಗಳನ್ನು ಅಕ್ರಮವಾಗಿ ಸ್ವಾಧೀನ ಹೊಂದಿ ಸಾಗಾಟ ಮಾಡುತ್ತಿರುತ್ತಾರೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**3.** ಆರೋಪಿಯನ್ನು ದಸ್ತಗಿರಿ ಮಾಡಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದು, ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿರುತ್ತದೆ. ದೋಷಾರೋಪಣಾ ಪಟ್ಟಿಯನ್ನು ಸ್ವೀಕರಿಸಿದ ನಂತರ, ಕರ್ನಾಟಕ ಅಬಕಾರಿ ಕಾಯ್ದೆ ಕಲಂ.11, 13(1)(ಎ), 14, 32(1), 38(ಎ), ಮತ್ತು 43(ಎ) ಅಡಿಗಳಲ್ಲಿ ಸಂಜ್ಞಾವನ್ನು ತೆಗೆದುಕೊಂಡು, ದೋಷಾರೋಪಣಾ ಪಟ್ಟಿಯ ಪ್ರತಿಯನ್ನು ಆರೋಪಿಗೆ ಒದಗಿಸಲಾಯಿತು. ದೋಷಾರೋಪಣೆ ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸಿ, ನಂತರ ಆರೋಪಿಗೆ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 11, 13(1)(ಎ), 14, 32(1), 38(ಎ), ಮತ್ತು 43(ಎ) ಅಡಿಯಲ್ಲಿ ದೋಷಾರೋಪಣೆಯನ್ನು ಓದಿ ಹೇಳಲಾಯಿತು, ಆರೋಪಿಯು ತನ್ನ ಮೇಲೆ ಮಾಡಿದ ಆಪಾದನೆಯನ್ನು ಅಲ್ಲಗೆಳೆದು, ವಿಚಾರಣೆಯಾಗಬೇಕೆಂದು ತಿಳಿಸಿರುತ್ತಾರೆ.

**4.** ಆರೋಪಿ ವಿರುದ್ದ ಮಾಡಿರುವ ಆರೋಪಗಳನ್ನು ಸಾಭೀತುಪಡಿಸುವ ಉದ್ದೇಶದಿಂದ ಮಾನ್ಯ ಅಭಿಯೋಜನೆಯು ತನ್ನ ಪರವಾಗಿ ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿರುವ 11 ಸಾಕ್ಷಿಗಳ ಪೈಕಿ, 5 ಸಾಕ್ಷಿಗಳನ್ನು ಪ್ರಾಸಾ.1 ರಿಂದ ಪ್ರಾಸಾ.5 ರಂತೆ ವಿಚಾರಣೆಗೆ ಒಳಪಡಿಸಿದ್ದು, ನಿಪಿ.1-ಮಹಜರ್, ನಿಪಿ.2-ಶೋಧನ ಸಮುಚಿತ ಆಧಾರ, ನಿಪಿ.3- ಮಾಲುಪಟ್ಟಿ, ನಿಪಿ.4-ಮಾದರಿ ಸೀಲು, ನಿಪಿ.5-ಪ್ರಾಸಾ.1 ರವರ ಹೇಳಿಕೆ, ನಿಪಿ.6-ಪ್ರಾಸಾ.3 ರವರ ಹೇಳಿಕೆ, ನಿಪಿ.7- ಸ್ವ ವರದಿ, ನಿಪಿ.8- ಪ್ರಥಮ ವರ್ತಮಾನ ವರದಿ, ನಿಪಿ.9-ಎಫ್ ಎಸ್ ಎಲ್ ಗೆ ನೀಡಿದ

ಮನವಿ ಪತ್ರ, ನಿಪಿ.10- ಆರ್ ಟಿ ಓ ರವರಿಗೆ ನೀಡಿದ ಮನವಿ ಪತ್ರ, ನಿಪಿ.11- ವಾಹನದ ಬಿ ಎಕ್ಸ್ಟ್ರಾಕ್ಟ್, ನಿಪಿ.12- ಚಾಸಾ.9 ರವರಿಗೆ ನೀಡಿದ ಕಾರಣ ಕೇಳಿ ನೋಟೀಸ್, ನಿಪಿ.13- ಚಾಸಾ.9 ರವರು ನೀಡಿದ ಸಮಜಾಯಿಸಿ ಮತ್ತು ನಿಪಿ.14- ಚಾಸಾ,9 ರವರ ಮುಚ್ಚಳಿಕೆ ಪತ್ರ ಮತ್ತು ಮು ಮಾ 1 ರಿಂದ 3 ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ತಮ್ಮ ಪರ ಸಾಕ್ಷಿಗಳ ವಿಚಾರಣೆಯನ್ನು ಮುಕ್ತಾಯ ಗೊಳಿಸಿಕೊಂಡಿರುತ್ತದೆ. ನಂತರ ಮಾನ್ಯ ಅಭಿಯೋಜನೆಯ ಪರ ಸಾಕ್ಷ್ಯದಲ್ಲಿ ಆರೋಪಿಗೆ ವಿರುದ್ದವಾದ ಸನ್ನಿವೇಶಗಳನ್ನು ಅವರಿಗೆ ಓದಿ ಹೇಳಿ, ಅವರು ನೀಡಿದ ಉತ್ತರಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ವಿಚಾರಣಾ ಕಾಲಕ್ಕೆ ನಮೂದಿಸಿಕೊಂಡಿರುತ್ತದೆ. ಆರೋಪಿ ತನ್ನ ಪರ ಯಾವುದೇ ಮೌಖಿಕ ಅಥವಾ ದಾಖಲೆಗಳು ಸಾಕ್ಷ್ಯವಿಲ್ಲವೆಂದು ನುಡಿದ ಕಾರಣ, ಅವರ ಪರ ಪ್ರತಿರಕ್ಷಾ ಸಾಕ್ಷ್ಯ ಇಲ್ಲವೆಂದು ಪರಿಗಣಿಸಿ, ವಾದ-ವಿವಾದಗಳನ್ನು ಕೇಳಿದ ನಂತರ, ಪ್ರಕರಣವನ್ನು ತೀರ್ಪಿಗೆಂದು ಕೈಗೆತ್ತಿಕೊಳ್ಳಲಾಯ್ತು.

**5.** ಉಭಯ ಪಕ್ಷಗಾರ ವಕೀಲರುಗಳ ವಾದ-ವಿವಾದಗಳನ್ನು ಆಲಿಸಿ ಮತ್ತು ಸಾಕ್ಷ್ಯಾಧಾರಗಳನ್ನು ಗಮನದಲ್ಲಿರಿಸಿಕೊಂಡು ಅವಲೋಕಿಸಿದಾಗ, ಈ ಪ್ರಕರಣದಲ್ಲಿ ನ್ಯಾಯಾಲಯದ ಪರಿಶೀಲನೆಗಾಗಿ ಉದ್ಭವಿಸುವ ಅಂಶಗಳು ಈ ಕೆಳಕಂಡಂತಿವೆ.

**ಅಂಶಗಳು**

**1.** ದಿನಾಂಕ 28.09.2021 ರಂದು ಬೆಳಿಗ್ಗೆ 6.30 ಗಂಟೆ ಸಮಯದಲ್ಲಿ ಪಿರಿಯಾಪಟ್ಟಣ ಠಾಣಾ ಸರಹದ್ದು, ರಾವಂದೂರು ಗ್ರಾಮದಲ್ಲಿ ಆರೋಪಿಯು TVS XL100 HEAVY DUTY ದ್ವಿಚಕ್ರ ವಾಹನದಲ್ಲಿ ಎರಡು ರಟ್ಟಿನ ಪೆಟ್ಟಿಗೆಯಲ್ಲಿ ತಲಾ 96 ರಂತೆ ಒಟ್ಟು

192 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಮದ್ಯ ತುಂಬಿದ ಟೆಟ್ರಾಪ್ಯಾಕ್ ಗಳನ್ನು ಅಕ್ರಮವಾಗಿ ಸ್ವಾಧೀನ ಹೊಂದಿ ಸಾಗಾಟ ಮಾಡುತ್ತಿರುತ್ತಾರೆ, ಆ ಮೂಲಕ **ಕರ್ನಾಟಕ ಅಬಕಾರಿ ಕಾಯಿದೆ ಕಲಂ 11, 13(1(ಎ), 14, 32(1), 38(ಎ)** ಮತ್ತು **43(ಎ)** ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದಾರೆಂದು ಮಾನ್ಯ ಅಭಿಯೋಜನೆಯು ನಿಸ್ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ ?

2. ಯಾವ ಆದೇಶ?

**6.** ಮೇಲ್ಕಂಡ ಅಂಶಕ್ಕೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆ.

ಅಂಶ: 1 : **ನಕಾರಾತ್ಮಕವಾಗಿ**

ಅಂಶ: 2 : ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ,

## ಕಾರಣಗಳು

**7.** **ಅಂಶ: 1 :-** ಅಭಿಯೋಜನೆಯವರು ಆರೋಪಿಯು ಕರ್ನಾಟಕ ಅಬಕಾರಿ ಕಾಯ್ದೆ ಅಡಿ ರೂಪಿಸಲಾದಂತಹ ನಿಯಮಗಳನ್ನು ಉಲ್ಲಂಘಿಸಿ ಯಾವುದೇ ಮದ್ಯ ತುಂಬಿದ ಪ್ಯಾಕೆಟ್ ಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಯಾವುದೇ ಪರವಾನಿಗೆ ಇಲ್ಲದೇ ಸ್ವಾದೀನ ಹೊಂದಿ ಮಾರಾಟ ಮಾಡುತ್ತೀರುತ್ತಾರೆ ಎಂಬ ಅಪರಾಧ ಎಸಗಿರುವನೆಂದು ಆರೋಪಿಸಿದ್ದಾರೆ. ಆರೋಪಿ ಹಾಜರಾತಿ ಪಡೆದ ನಂತರ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿದಾಗ, ಆರೋಪಿ ತಾನು ತಪ್ಪು ಮಾಡಿಲ್ಲವೆಂದು ಅಭಿಯೋಜನೆಯವರ ಆರೋಪವನ್ನು ಅಲ್ಲಗಳೆದಿದ್ದಾರೆ. ಕಾನೂನಿನಡಿ ಲಭ್ಯವಿರುವ ಪೂರ್ವ ಭಾವನೆ ಏನೆಂದರೆ ಅಭಿಯೋಜನೆಯವರು ಆಪಾದಿತನ ಮೇಲೆ ಮಾಡಲಾದ ಆರೋಪವನ್ನು ಸಂಶಯಾತೀತವಾಗಿ ರುಜುವಾತು

ಪಡಿಸುವವರೆಗೆ ಅವನನ್ನು ಮುಗ್ಧನೆಂದು ಪೂರ್ವ ಭಾವನೆ ತಳೆಯಬೇಕು ಎಂಬುದಾಗಿದ್ದು, ಅದೇ ಪೂರ್ವ ಭಾವನೆಯನ್ನು ಈ ಪ್ರಕರಣದ ಆರೋಪಿಗೂ ವಿಸ್ತರಿಸಿ ಅಭಿಯೋಜನೆಯವರನ್ನು ಆರೋಪಣೆಯನ್ನು ರುಜುವಾತು ಪಡಿಸಲು ಆಹ್ವಾನಿಸಿದ ಮೇರೆಗೆ, ದೋಷಾರೋಪಣೆಯನ್ನು ರುಜುವಾತುಪಡಿಸುವ ಹೊಣೆಯನ್ನು ಹೊತ್ತ ಅಭಿಯೋಜನೆಯವರು, ತಮ್ಮ ಪರ ನುಡಿಸಾಕ್ಷ್ಯದಲ್ಲಿ ಒಟ್ಟು 11 ಜನ ಸಾಕ್ಷಿದಾರರ ಪೈಕಿ ಪ್ರಾ.ಸಾ.1 ರಿಂದ 5 ಎಂದು, ನುಡಿ ಸಾಕ್ಷ್ಯದ ಪೂರಕವಾಗಿ 14 ದಾಸ್ತಾವೇಜುಗಳನ್ನು ನಿಪಿ.1 ರಿಂದ 14 ಎಂದು ಮತ್ತು ಮದ್ಯದ ಟೆಟ್ರಾ ಪ್ಯಾಕೆಟ್ ಮತ್ತು ರಟ್ಟಿನ ಪೆಟ್ಟಿಗೆಗಳನ್ನು ಮು.ಮಾ.1 ರಿಂದ 3 ಎಂದು ಗುರುತಿಸಿಕೊಂಡಿದ್ದಾರೆ.

**8.** ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ರ ರುಜುವಾತಿನ ವೈಶಿಷ್ಟವೇನೆಂದರೆ ಅಭಿಯೋಜನೆಯವರು ಮುದ್ದೆಮಾಲುಗಳ ಅಮಾನತ್ತನ್ನು ನಂಬಿಕಾರ್ಹವಾಗುವಂತೆ ರುಜುವಾತು ಪಡಿಸಬೇಕು. ಈ ನಿಟ್ಟಿನಲ್ಲಿ ಅಭಿಯೋಜನೆಯವರು ಯಶಸ್ವಿಯಾದರೆ ಈ ಕಾಯ್ದೆ ಕಲಂ.40 ರಡಿ ಕೊಡಲ್ಪಟ್ಟ ಪೂರ್ವಭಾವನೆಯಂತೆ ಆರೋಪಿ ಸದರಿ ಮಾಲುಗಳನ್ನು ಅಕ್ರಮವಾಗಿ ಮಾರಾಟ ಮಾಡುವ ಉದ್ದೇಶದಿಂದ ಹೊಂದಿದ್ದರು ಎಂದು ಪೂರ್ವಭಾವನೆ ತಳೆಯಬೇಕಾಗುತ್ತದೆ. ಆ ಸಂದರ್ಭಕ್ಕೆ, ಆರೋಪಿ ಮೇಲೆ ಅದನ್ನು ಸುಳ್ಳಾಗಿಸುವ ಹೊಣೆ ವರ್ಗಾವಣೆಗೊಳ್ಳುತ್ತದೆ. ಒಂದು ವೇಳೆ ಆರೋಪಿ ಸದರಿ ಪೂರ್ವಭಾವನೆಯನ್ನು ನಿರಸನಗೊಳಿಸಲು ವಿಫಲವಾದರೆ, ದೋಷಿ ಎಂದು ನಿರ್ಣಯಿಸಬಹುದು ಅಥವಾ ಅಭಿಯೋಜನೆಯವರು ಅಮಾನತ್ತನ್ನು

ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲರಾದರೆ ಕಲಂ.40 ರಡಿ ಲಭ್ಯವಿರುವ ಪೂರ್ವಭಾವನೆ ತಳೆಯುವ ಪ್ರಶ್ನೆ ಉದ್ಭವಿಸುವುದಿಲ್ಲ.

**9.** ಅಭಿಯೋಜನೆಯು ದೋಷಾರೋಪಣೆಯನ್ನು ಸಾಭೀತುಪಡಿಸಲು, ಈ ಪ್ರಕರಣದ ಪಂಚ ಸಾಕ್ಷ್ಯಗಳಾದ ಚಾಸಾ.2- ಸಂಜು ಮತ್ತು ಚಾಸಾ.1- ನಂಜುಂಡಾರಾಧ್ಯ ರವರನ್ನು ಪ್ರಾಸಾ.1 ಮತ್ತು ಪ್ರಾಸಾ.3 ರಂತೆ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು, ಈ ಸಾಕ್ಷಿದಾರರು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ, ಪೊಲೀಸರು ತಮ್ಮ ಸಮಕ್ಷಮ ಯಾರನ್ನೂ ದಸ್ತಗಿರಿ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ, ತಾವು ಒಂದು ದಾಖಲೆಯ ಮೇಲೆ ಸಹಿ ಮಾಡಿರುವುದಾಗಿ, ಅದರಲ್ಲಿ ಏನು ಬರೆದಿದೆ ಎಂದು ತಮಗೆ ಗೊತ್ತಿಲ್ಲ ಎಂದು ಮಹಜರ್, ಮಾಲುಪಟ್ಟಿ, ಶೋಧನಾ ಸಮುಚಿತ ಆಧಾರ ಹಾಗೂ ಮಾದರಿ ಸೀಲಿನಲ್ಲಿರುವ ತಮ್ಮ ಸಹಿಗಳನ್ನು ಗುರುತಿಸಿರುವುದಾಗಿ ನುಡಿಯುತ್ತಾ ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿಗಳಾಗಿ ಪರಿಣಮಿಸಿ ಸಾಕ್ಷಿ ನುಡಿದಿರುತ್ತಾರೆ. ಪ್ರಾಸಾ.1 ಮತ್ತು 3 ರವರನ್ನು ಮಾನ್ಯ ಸರ್ಕಾರಿ ಸಹಾಯ ಅಭಿಯೋಜನೆಯು ಪ್ರತಿಕೂಲ ಸಾಕ್ಷಿಯೆಂದು ಎಂದು ಪರಿಗಣಿಸಿ ಮಾಡಿದ ಪಾಟೀ ಸವಾಲಿನಲ್ಲಿ, ಇವರಿಗೆ ಸೂಚಿಸಿದ ಎಲ್ಲಾ ಸಲಹೆಗಳನ್ನು ಸ್ಪಷ್ಟವಾಗಿ ಅಲ್ಲಗಳೆದಿರುತ್ತಾರೆ. ಅಲ್ಲದೇ, ಸದರಿ ಸಾಕ್ಷಿಯಿಂದ ಮಾನ್ಯ ಅಭಿಯೋಜನೆಯ ಪ್ರಕರಣಕ್ಕೆ ಸಹಕಾರವಾಗುವಂತಹ ಯಾವುದೇ ಪೂರಕ ಸಾಕ್ಷ್ಯವು ಒದಗಿ ಬಂದಿರುವುದಿಲ್ಲ.

**10.** ಇಲಾಖಾ ಸಾಕ್ಷಿಗಳಾದ ಚಾಸಾ.3-ಕುಮಾರ.ಹೆಚ್.ಜಿ., ಚಾಸಾ.7- ಸುಧಾರಾಣಿ ಮತ್ತು ಚಾಸಾ.11-ಧರ್ಮರಾಜು ರವರುಗಳನ್ನು ಪ್ರಾಸಾ. 2, 4

ಮತ್ತು 5 ರಂತೆ ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.2 ಮತ್ತು ಪ್ರಾಸಾ.4 ರವರು ಇಲಾಖಾ ಸಾಕ್ಷಿಗಳಾಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ.28/09/2021 ರಂದು ಬೆಳಿಗ್ಗೆ 6.30 ಗಂಟೆ ಸಮಯದಲ್ಲಿ ಚಾಸಾ.3, ಚಾಸಾ-7, ಚಾಸಾ-4 ಮತ್ತು 5 ಹಾಗೂ ವಾಹನ ಚಾಲಕರಾದ ಚಾಸಾ-6 ರವರ ಜೊತೆ ಇಲಾಖಾ ವಾಹನ ಸಂಃ ಕೆಎ-45-ಜಿ-107 ರಲ್ಲಿ ಮಾಕೋಡು ಗ್ರಾಮದ ಸರ್ಕಲ್ ಬಳಿ, ಪಂಚರ ಸಮಕ್ಷಮ ರಸ್ತೆಗಾವಲು ನಡೆಸುತ್ತಿದ್ದಾಗ, ರಾವಂದೂರು ಗ್ರಾಮದ ರಸ್ತೆಕಡೆಯಿಂದ ಒಂದು ದ್ವಿಚಕ್ರ ವಾಹನ ಬರುತ್ತಿತ್ತು. ಅನುಮಾನದ ಮೇರೆಗೆ ತಾವು ಅದನ್ನು ತಡೆದು ನಿಲ್ಲಿಸಿದಾಗ ಒಬ್ಬ ಆಸಾಮಿ ತನ್ನ ವಾಹನವನ್ನು ಬಿಟ್ಟು ಓಡಿಹೋಗಲು ಪ್ರಯತ್ನಿಸಿದ್ದು, ತಾವುಗಳು ಬೆನ್ನಟ್ಟಿ ಹಿಡಿದು ಕರೆತಂದು, ವಾಹನದ ಬಳಿ ಬಂದು ನೋಡಿದಾಗ ವಾಹನದ ಮದ್ಯ ಭಾಗದಲ್ಲಿ ಎರಡು ರಟ್ಟಿನ ಪೆಟ್ಟಿಗೆಗಳು ಇರುವುದು ಕಂಡು ಬಂದಿದ್ದು, ನಂತರ ಪೆಟ್ಟಿಗೆಗಳನ್ನು ಮತ್ತು ಸದರಿ ವಾಹನವನ್ನು ಪರಿಶೀಲಿಸಿದಾಗ ಸದರಿ ವಾಹನ ಕಪ್ಪು ಮತ್ತು ಹಸಿರು ಬಣ್ಣಮಿಶ್ರಿತವಾಗಿದ್ದು, ಯಾವುದೇ ನೊಂದಣಿ ಸಂಖ್ಯೆ ಇರುವುದಿಲ್ಲ. ಸದರಿ ವಾಹನ ಟಿವಿಎಸ್ XL100 ಹೆವಿ ಡ್ಯೂಟಿ ದ್ವಿಚಕ್ರ ವಾಹನವಾಗಿದ್ದು, ನಂತರ ಸದರಿ ವಾಹನದಲ್ಲಿದ್ದ ಎರಡು ರಟ್ಟಿನ ಪೆಟ್ಟಿಗೆಗಳನ್ನು ಪರಿಶೀಲಿಸಿದಾಗ ಅದರ ಮೇಲೆ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಎಂಬ ಹೆಸರಿರುವ ಎರಡು ರಟ್ಟಿನ ಪೆಟ್ಟಿಗೆಗಳಿದ್ದು, ಅವುಗಳನ್ನು ಕ್ರಮ ಸಂಃ1 ಮತ್ತು 2 ಎಂದು ನಮೂದಿಸಿಕೊಂಡಿದ್ದು, ಕ್ರ.ಸಂಃ1 ರ ಪೆಟ್ಟಿಗೆಯನ್ನು ತೆರೆದು ನೋಡಿದಾಗ ಅದರಲ್ಲಿ 90 ಎಂ.ಎಲ್.ನ 96 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಮದ್ಯದ ಟೆಟ್ರಾ ಪ್ಯಾಕೇಟ್‌ಗಳು ಇರುತ್ತವೆ. ಕ್ರಮಸಂಖ್ಯೆ.1 ರ ಬಾಕ್ಸ ನಂಬರ್ 149/200 ಆಗಿದ್ದು, ನಂತರ ಕ್ರಮಸಂಖ್ಯೆ.2 ರ

ಬಾಕ್ಸನ್ನು ತೆಗೆದು ನೋಡಿದಾಗ ಅದರಲ್ಲಿಯೂ ಸಹ 90 ಎಂ.ಎಲ್.ನ 96 ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಟೆಟ್ರಾ ಪ್ಯಾಕೇಟ್‌ಗಳು ಇರುವುದು ಕಂಡುಬಂದಿದ್ದು, ಅದರ ಬಾಕ್ಸ್ ನಂಬರ್ 155/200 ಆಗಿದ್ದು, ನಂತರ ಆಸಾಮಿಯನ್ನು ಈ ಮದ್ಯವನ್ನು ಹೊಂದಲು ದಾಖಲಾತಿ ಮತ್ತು ರಹದಾರಿ ಇದೆಯೇ ಎಂದು ಕೇಳಲಾಗಿ ಇಲ್ಲವೆಂದು ನುಡಿದಿದ್ದು, ನಂತರ ಸದರಿ ಆಸಾಮಿಗೆ ಯಾವುದೇ ಪರವಾನಿಗೆ ಇಲ್ಲದೇ ಸಾಗಾಟ ಮಾಡುವುದು ಕಾನೂನು ಉಲ್ಲಂಘನೆ ಎಂದು ತಿಳಿಸಿ, ನಂತರ ದೊರೆತ ಮುದ್ದೇಮಾಲುಗಳ ಪೈಕಿ ಪ್ರತಿ ರಟ್ಟಿನ ಪೆಟ್ಟಿಗೆಯಿಂದ 15 ರಂತೆ ಒಟ್ಟು 30 ಟೆಟ್ರಾ ಪ್ಯಾಕೇಟ್ ಗಳನ್ನು ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದು ಒಂದು ಬಿಳಿಯ ಬಟ್ಟೆಯಿಂದ ಚೀಲವನ್ನು ತಯಾರಿಸಿ, 30 ಟೆಟ್ರಾ ಪ್ಯಾಕೇಟ್ ಗಳನ್ನು ತುಂಬಿಸಿ ದಾರದಿಂದ ಕಟ್ಟಿ ಸಮವಸ್ತ್ರದ ಬಟನ್ ನಿಂದ ಅರಗಿನ ಸೀಲನ್ನು ಹಾಕಿ, ಉಳಿದ ಟೆಟ್ರಾ ಪ್ಯಾಕೇಟ್ ಗಳನ್ನು ಸದರಿ ಬಾಕ್ಸ್ ಗಳಿಗೆ ತುಂಬಿ ಟೇಪ್‌ನಿಂದ ಸೀಲು ಮಾಡಿ ಬಿಳಿ ದಾರದಿಂದ ಕಟ್ಟಿ ಅರಗಿನಿಂದ ಸೀಲು ಮಾಡಿ, ನಂತರ ಮಾದರಿ ಚೀಟಿ ಮತ್ತು ಮಾದರಿ ಸೀಲಿನ ನಕಲನ್ನು ತಯಾರಿಸಿ, ವಿವರವನ್ನು ನಮೂದಿಸಿ, ಪಂಚರ ಸಹಿ ಪಡೆದು ಮಾದರಿ ಚೀಟಿಗಳನ್ನು ವಾಹನ ಮತ್ತು ಮುದ್ದೇಮಾಲುಗಳಿಗೆ ಅಂಟಿಸಿ, ಎಲ್ಲಾ ಮುದ್ದೇಮಾಲುಗಳನ್ನು ಇಲಾಖಾ ವಶಕ್ಕೆ ಪಡೆದು ಸದರಿ ಆಸಾಮಿಯ ಹೆಸರು ವಿಳಾಸ ಕೇಳಲಾಗಿ ಆತನ ಹೆಸರು ರಾಜ ಬಿನ್ ಸಕಲಾರಾಧ್ಯ, 40 ವರ್ಷ, ಅರಳಹಳ್ಳಿ ಗ್ರಾಮ, ರಾವಂದೂರು ಹೋಬಳಿ, ಪಿರಿಯಾಪಟ್ಟಣ ತಾಲ್ಲೂಕು ಎಂದು ತಿಳಿಸಿದ್ದು, ನಂತರ ಸ್ಥಳ ಮಹಜರನ್ನು ಬೆಳಿಗ್ಗೆ 6.30 ಗಂಟೆಯಿಂದ 7.45 ಗಂಟೆಯವರೆಗೆ ಜರುಗಿಸಿ, ನಂತರ ಆಸಾಮಿಯನ್ನು ಮತ್ತು ಮಾಲುಗಳನ್ನು ಮುಂದಿನ ಕ್ರಮಕ್ಕೆ ಕಚೇರಿಗೆ ತಂದಿದ್ದು,

ನಂತರ ತನ್ನ ಹೇಳಿಕೆಯನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಫ್ರಾಸಾ.4 ರವರು ಮುಂದುವರೆದ ತನ್ನ ಮುಖ್ಯ ವಿಚಾರಣೆಯಲ್ಲಿ ನಂತರ ಆಸಾಮಿ ಮತ್ತು ಮಾಲುಗಳನ್ನು ಮುಂದಿನ ಕ್ರಮಕ್ಕೆ ಕಚೇರಿಗೆ ತಂದು, ನಂತರ ತಾನು ತನ್ನ ಸ್ವ ವರದಿಯನ್ನು ತಯಾರಿಸಿ ಪ್ರಕರಣ ದಾಖಲಿಸಿ, ನಂತರ ಮುಂದಿನ ತನಿಖೆಯನ್ನು ಚಾಸಾ.11 ರವರಿಗೆ ವಹಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ.

**11.** ಆರೋಪಿ ಪರ ವಕೀಲರು ಫ್ರಾಸಾ.2 ರವರನ್ನು ಪಾಟೀ ಸವಾಲಿಗೆ ಒಳಪಡಿಸಿರುತ್ತಾರೆ. ಫ್ರಾಸಾ.2 ರವರು ತಮ್ಮ ಪಾಟೀಸವಾಲಿನಲ್ಲಿ ತನಗೆ ದೂರು ಬಂದಿರಲಿಲ್ಲ. ತನ್ನ ಮೇಲಾಧಿಕಾರಿಯವರಿಗೆ ದೂರು ಬಂದಿತ್ತು. ಅವರಿಗೆ ಯಾವ ಸಮಯಕ್ಕೆ ದೂರು ಬಂದಿತ್ತು ಎಂದು ಗೊತ್ತಿಲ್ಲ. ತಾನು ಬೆಳಿಗ್ಗೆ 5.00 ಗಂಟೆಗೆ ಕರ್ತವ್ಯಕ್ಕೆ ಹಾಜರಾಗಿದ್ದು, ತಾನು ಕರ್ತವ್ಯ ನಿರ್ವಹಿಸುವ ಸ್ಥಳ ಹುಣಸೂರಿನಿಂದ ಮಾಕೋಡು ಗ್ರಾಮ ಸುಮಾರು 30 ಕಿಮೀ ಅಂತರ ಇದ್ದು, ತಾವು ಹುಣಸೂರಿನಿಂದ ಬರುವಾಗ ಬೇರೆ ವಾಹನಗಳನ್ನು ತಪಾಸಿಸಿಲ್ಲ.ತಾವು ಮಾಕೋಡು ಗ್ರಾಮದ ಬಸ್ ಸ್ಟಾಂಡ್ ಬಳಿ ಬಂದಾಗ ಬೆಳಿಗ್ಗೆ 6.00 ಗಂಟೆ ಆಗಿತ್ತು. ಬಸ್ ಸ್ಟಾಂಡ್ ನ ಚಕ್ಕುಬಂದಿ ಗೊತ್ತಿಲ್ಲ, ತಾವು ಒಟ್ಟು 15 ವಾಹನಗಳನ್ನು ತಪಾಸಿಸಿದ್ದು, ಆ ವಾಹನಗಳ ತಪಾಸಣೆ ಬಗ್ಗೆ ರಸ್ತೆಗಾವಲು ಪುಸ್ತಕದಲ್ಲಿ ನಮೂದಿಸಿದ್ದು, ಈಗ ಹೇಳಲು ಆಗುವುದಿಲ್ಲ. ಪಂಚರು ಯಾವ ಉದ್ದೇಶಕ್ಕೆ ಆ ಸ್ಥಳದಲ್ಲಿದ್ದರು ಎಂದು ತಾವು ವಿಚಾರಿಸಿಲ್ಲ. ಪಂಚರು ಅರಳಹಳ್ಳಿ ಮತ್ತು ಎನ್.ಶೆಟ್ಟಹಳ್ಳಿ ಗ್ರಾಮದವರು. ಫ್ರಾಸಾ-1 ರವರ ತಂದೆಯ ಹೆಸರು ನೆನಪಿಲ್ಲ, ಶೆಟ್ಟಹಳ್ಳಿ ಗ್ರಾಮಕ್ಕೂ ಮಾಕೋಡು ಗ್ರಾಮಕ್ಕೂ ಎಷ್ಟು ಅಂತರ ಇದೆ ಎಂದು ಗೊತ್ತಿಲ್ಲ, ಮಾಕೋಡು ಗ್ರಾಮಸ್ಥರೂ ಸಹ ಸ್ಥಳದಲ್ಲಿ ಓಡಾಡುತ್ತಿದ್ದರು ಎಂದು

ಒಪ್ಪಿಕೊಂಡಿರುತ್ತಾರೆ. ಸ್ಥಳೀಕರನ್ನು ಪಂಚರನ್ನಾಗಿ ಮಾಡಿಲ್ಲ, ಈ ದಿನ ಅಮಾನತ್ತು ಪಡಿಸಿಕೊಂಡ ಎಲ್ಲಾ ಟೆಟ್ರಾ ಪ್ಯಾಕೇಟ್‌ಗಳು ನ್ಯಾಯಾಲಯದ ಮುಂದೆ ಇಲ್ಲ, ಮಹಜರ್ ನಲ್ಲಿ ಟೆಟ್ರಾ ಪ್ಯಾಕೇಟ್‌ಗಳ ಬ್ಯಾಚ್ ನಂಬರ್, ತಯಾರಿಕಾ ಕಂಪನಿಯ ಹೆಸರು ನಮೂದಿಸಿಲ್ಲ. ರಟ್ಟಿನ ಬಾಕ್ಸ್ ಗಳು ಜಾನ್ ಡಿಸ್ಟೆಲೆರಿಸ್ ಕಂಪನಿಯದ್ದು ಎಂದು ಒಪ್ಪಿಕೊಂಡಿರುತ್ತಾರೆ. ಪ್ರಾಸಾ.2 ರವರು ಮುಂದುವರೆದ ತನ್ನ ಪಾಟೀ ಸವಾಲಿನಲ್ಲಿ ಆರೋಪಿತ ಘಟನಾ ದಿನ ಸ್ಥಳಕ್ಕೆ ಬಂದಿಲ್ಲ, ತಾನು ಗಸ್ತಿಗೆ ಹಾಜರಿರಲಿಲ್ಲ, ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ,. ಮುದ್ದೇಮಾಲಿಗೂ ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ, ಘಟನಾ ಸ್ಥಳದ 4 ದಿಕ್ಕಿನಲ್ಲೂ ರಸ್ತೆ ಇದ್ದು, ಸುಳ್ಳು ಚಕ್ಕುಬಂದಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, ಯಾವುದೇ ಮಹಜರ್ ತಯಾರಿಸಿಲ್ಲ, ಪಂಚರಿಗೆ ನಾವು ಯಾವುದೇ ನೋಟೀಸು ನೀಡಿಲ್ಲ ಮತ್ತು ಸ್ಥಳದಲ್ಲಿ ಸಹಿ ಮಾಡಿಲ್ಲ ಎಂಬುದನ್ನು ಅಲ್ಲಗಳೆದಿರುತ್ತಾರೆ.

**12.** ಆರೋಪಿ ಪರ ವಕೀಲರು ಸದರಿ ಸಾಕ್ಷಿಯನ್ನು ಪಾಟೀ ಸವಾಲಿಗೆ ಒಳಪಡಿಸಿರುತ್ತಾರೆ. ಪ್ರಾಸಾ.4 ರವರು ತಮ್ಮ ಪಾಟೀಸವಾಲಿನಲ್ಲಿ ದಿನಾಂಕ.28/09/2021 ರಂದು ಬೆಳಿಗ್ಗೆ 5.00 ಗಂಟೆಗೆ ಬಾತ್ಮಿ ಬಂದಿದ್ದು, ಆ ಸಮಯದಲ್ಲಿ ತಾನು ಹುಣಸೂರು ಕೇಂದ್ರಸ್ಥಾನದಲ್ಲಿದ್ದೆ. ಆ ದಿನ ಗಸ್ತಿಗೆ ಎಷ್ಟು ಗಂಟೆಗೆ ಹೋದೆವು, ಯಾವ ಸ್ಥಳಕ್ಕೆ ಹೋದೆವು ಎಂದು ದಿನಚರಿಯಲ್ಲಿ ನಮೂದು ಮಾಡಿರುವುದಾಗಿ, ತಾವು ಮಾರ್ಗದಲ್ಲಿ ಬರುವಾಗ ಯಾವುದೇ ವಾಹನಗಳನ್ನು ತಪಾಸಣೆ ಮಾಡಿಲ್ಲ, ತಾವು ಹುಣಸೂರಿನಿಂದ ಕಂಪಲಾಪುರ ಮಾರ್ಗವಾಗಿ ಮಾಕೋಡು ಗ್ರಾಮಕ್ಕೆ ತಲುಪಿದ್ದು, ಕಂಪಲಾಪುರದಿಂದ ಮಾಕೋಡು ಗ್ರಾಮ ಎಷ್ಟು ಅಂತರ ಇದೆ ಎಂದು ಗೊತ್ತಿಲ್ಲ. ಕಂಪಲಾಪುರದಿಂದ ಮಾಕೋಡು ಗ್ರಾಮಕ್ಕೆ

ಹೋಗಬೇಕಾದರೆ ರಾವಂದೂರು ಮುಖಾಂತರ ಹೋಗಬೇಕೋ ಇಲ್ಲವೋ ನೆನಪಿಲ್ಲ. ಈಗಲೂ ಮಾಕೋಡಿಗೆ ರಾವಂದೂರು ಮುಖಾಂತರ ಹೋಗಬೇಕೋ ಇಲ್ಲವೋ ಗೊತ್ತಿಲ್ಲ. ವಾಹನವು ಯಾವ ದಿಕ್ಕಿನಿಂದ ಯಾವ ದಿಕ್ಕಿಗೆ ಹೋಗುತ್ತಿತ್ತು ಎಂದು ಗೊತ್ತಿಲ್ಲ. ರಾವಂದೂರಿನಿಂದ ಮಾಕೋಡು ಗ್ರಾಮ ಯಾವ ದಿಕ್ಕಿಗೆ ಇದೆ ಎಂದು ತಿಳಿದುಕೊಂಡಿಲ್ಲ. ಆ ದಿನ ನಾನು ಸ್ಥಳಕ್ಕೆ ಹೋಗಿಲ್ಲ, ಆರೋಪಿತನನ್ನು ದಸ್ತಗಿರಿ ಮಾಡಿಲ್ಲ, ಯಾವುದೇ ಮಾಲನ್ನು ಅಮಾತನ್ತು ಪಡಿಸಿಕೊಂಡಿಲ್ಲ ಎಂಬುದನ್ನು ಅಲ್ಲಗಳೆದಿರುತ್ತಾರೆ. ಪ್ರಾಸಾ.4 ರವರು ಮುಂದುವರೆದ ಪಾಟೀ ಸವಾಲಿನಲ್ಲಿ ಆರೋಪಿತನ ಫೋಟೋ ತೆಗೆದಿದ್ದು, ವಾಹನದ ಫೋಟೋ ಮತ್ತು ವಿಡೀಯೋ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ವಾಹನ ಯಾವ ಬಣ್ಣದ್ದು ಎಂದು ನಿಖರವಾಗಿ ಗೊತ್ತಿಲ್ಲ, ವಾಹನದ ಮೇಲೆ ಇದ್ದ ವಿಶೇಷ ಗುರುತುಗಳು ಗೊತ್ತಿಲ್ಲ. ಆರೋಪಿತನನ್ನು ಮದ್ಯವನ್ನು ಎಲ್ಲಿಂದ ಖರೀದಿಸಿದ್ದು ಎಂದು ವಿಚಾರಣೆ ಮಾಡಿಲ್ಲ ಎಂದು ನುಡಿದಿರುತ್ತಾರೆ. ಮುಂದುವರೆದು, ಅಮಾನತ್ತುಪಡಿಸಿಕೊಂಡ ಮದ್ಯದ ಬ್ಯಾಚ್ ಸಂಖ್ಯೆಯನ್ನು ಮಹಜರ್ ನಲ್ಲಿ ಬರೆದಿರುವುದಾಗಿ, ನಿಪಿ.1 ಮಹಜರಿಗೆ ಪಂಚರು ಮತ್ತು ಗಸ್ತಿನಲ್ಲಿದ್ದ ತಾವು ಸಹಿ ಮಾಡಿದ್ದು, ಚಾಸಾ-2 ರವರು ಎನ್.ಶೆಟ್ಟಹಳ್ಳಿ ಗ್ರಾಮದವರಾಗಿದ್ದು, ಆಗ ಬೆಳಗಿನ ಜಾವ ಆದುದ್ದರಿಂದ ಸಾರ್ವಜನಿಕರು ಇರಲಿಲ್ಲ. ಎನ್.ಶೆಟ್ಟಹಳ್ಳಿ ಗ್ರಾಮಕ್ಕೂ ಮಾಕೋಡು ಗ್ರಾಮಕ್ಕೂ ಎಷ್ಟು ಅಂತರ ಇದೆ ಎಂದು ತನಗೆ ಗೊತ್ತಿಲ್ಲ. ಸದರಿ ಗ್ರಾಮಗಳಿಗೆ 20 ಕಿ.ಮೀ ಅಂತರ ಇದೆ ಎಂದರೆ ತನಗೆ ಗೊತ್ತಿಲ್ಲ. ಮಾಕೋಡು ಗ್ರಾಮದಲ್ಲಿ ಸುಮಾರು 3000 ಜನಸಂಖ್ಯೆ ಇದ್ದು, ದಾಳಿ ಮಾಡಿದ್ದರೆ ಅಲ್ಲಿನ ಸಾರ್ವಜನಿಕರನ್ನು ಪಂಚರನ್ನಾಗಿ ಮಾಡಬಹುದಿತ್ತು, ಠಾಣೆಯಲ್ಲೇ ಮಹಜರ್ ತಯಾರಿಸಿದ್ದರಿಂದ

ಮಾಕೋಡು ಗ್ರಾಮಸ್ಥರನ್ನು ಪಂಚರನ್ನಾಗಿ ಮಾಡಿಲ್ಲ, ಆರೋಪಿತನನ್ನು ದಸ್ತಗಿರಿ ಮಾಡುವಾಗ ಬೆಳಿಗ್ಗೆ 6.30 ಗಂಟೆಯಾಗಿತ್ತು, ಆ ಸಮಯಕ್ಕೆ ಜನರು ಓಡಾಡುತ್ತಿರುತ್ತಾರೆ ಎಂದರೆ ಬೆರಣಿಕೆಯಷ್ಟು ಓಡಾಡುತ್ತಿರುತ್ತಾರೆ ಎಂದು ನುಡಿದಿರುತ್ತಾರೆ. ಮುಂದುವರೆದು ತಾನು ಸುಳ್ಳು ಚಕ್ಕುಬಂದಿಯನ್ನು ತಿಳಿಸಿದ್ದೇನೆ, ಸದರಿ ಚಕ್ಕುಬಂದಿ ಮಾಕೋಡು ಗ್ರಾಮದಲ್ಲಿಲ್ಲ, ತಾವು ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ, ಅಂಕಿಅಂಶಕ್ಕೋಸ್ಕರ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂಬುದನ್ನು ಅಲ್ಲಗಳೆದಿರುತ್ತಾರೆ.

**13.** ಚಾಸಾ.11-ಧರ್ಮರಾಜು ರವರನ್ನು ಪ್ರಾಸಾ.5 ರಂತೆ ಸಾಕ್ಷಿಗೆ ಒಳಪಡಿಸಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ. 02/10/2021 ರಂದು ಈ ಪ್ರಕರಣದ ಕಡತವನ್ನು ಚಾಸಾ-7 ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿ, ದಿನಾಂಕ.04/10/2021 ರಂದು ಚಾಸಾ-10 ರವರ ಮೂಲಕ ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ಮದ್ಯವನ್ನು ರಾಸಾಯನಿಕ ಪರೀಕ್ಷೆಗೆ FSL ಬೆಂಗಳೂರಿಗೆ ಕಳುಹಿಸಿ, ದಿನಾಂಕ.01/12/2021 ರಂದು ಚಾಸಾ-10 ರವರು FSL ವರದಿಯನ್ನು ತಂದು ಹಾಜರುಪಡಿಸಿದ್ದು, ದಿನಾಂಕ. 12/10/2021 ರಂದು ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ವಾಹನದ ಮಾಲೀಕತ್ವವನ್ನು ಕೋರಿ ಹುಣಸೂರಿನ ಆರ್ ಟಿ ಒ ರವರಿಗೆ ಮನವಿ ಪತ್ರವನ್ನು ಸಲ್ಲಿಸಿ, ಅವರು ದಿನಾಂಕ.13/10/2021 ರಂದು ಸದರಿ ವಾಹನವು ಚಾಸಾ-9 ರವರ ಹೆಸರಿನಲ್ಲಿದೆ ಎಂದು ವರದಿಯನ್ನು ನೀಡಿದ್ದು, ದಿನಾಂಕ.18/10/2021 ರಂದು ಪಂಚರ ಮತ್ತು ಸಿಬ್ಬಂದಿಗಳ ಹೇಳಿಕೆಗಳನ್ನು ಪಡೆದು, ದಿನಾಂಕ. 01/12/2021 ರಂದು ಚಾಸಾ-9 ರವರು ತಮ್ಮ ಸಮಜಾಯಿಷಿಯಲ್ಲಿ ಸದರಿ ವಾಹನವು ತನಗೆ ಸೇರಿದ್ದು, ತನ್ನ

ಗಂಡ ರಾಜ ಬಿನ್ ಸಕಲಾರಾಧ್ಯ ರವರು ಬಳಸುತ್ತಿದ್ದು, ಈ ಕೃತ್ಯಕ್ಕೆ ಅವರೇ ಸಂಪೂರ್ಣ ಜವಾಬ್ದಾರರು ಎಂದು ಮುಚ್ಚಳಿಕೆ ಪತ್ರ ಮತ್ತು ಹೇಳಿಕೆಯನ್ನು ನೀಡಿದ್ದು ಮತ್ತು ದಿನಾಂಕ. 05/12/2021 ರಂದು ಆರೋಪಿತ ಕಚೇರಿಗೆ ಹಾಜರಾಗಿ ತನ್ನ ಸ್ವ ಇಚ್ಛಾ ಹೇಳಿಕೆಯನ್ನು ನೀಡಿದ್ದು, ಅದೇ ದಿನ ತನಿಖೆ ಪೂರೈಸಿ ಆರೋಪಿತನ ವಿರುದ್ಧ ಮೇಲ್ನೋಟಕ್ಕೆ ಆರೋಪ ಸಾಬೀತಾದ ಕಾರಣ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಮಾನ್ಯ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ, ಇವರಿಗೆ ಸೂಚಿಸಿದ ಎಲ್ಲಾ ಸಲಹೆಗಳನ್ನು ಸ್ಪಷ್ಟವಾಗಿ ಅಲ್ಲಗಳೆದಿರುತ್ತಾರೆ. ಸದರಿ ಸಾಕ್ಷಿಯ ಸಾಕ್ಷ್ಯವು ಪುರಾವೆಯಲ್ಲಿ ಔಪಚಾರಿಕವಾಗಿದ್ದು, ಘಟನೆಗೆ ಪೂರಕ ಸಾಕ್ಷಿ ಆಗಿರುವುದಿಲ್ಲ.

**14.** ಅಭಿಯೋಜನೆಯವರ ವಾದದಂತೆ ಪ್ರಾಸಾ.1 ಮತ್ತು ಪ್ರಾಸಾ.3 ರವರು ಮಹಜರ್ ಸಾಕ್ಷಿಯಾಗಿ ನಿಪಿ.1 ಕ್ಕೆ ಸಹಿ ಮಾಡಿರುವ ಸಾಕ್ಷಿದಾರರಾಗಿರುತ್ತಾರೆ. ಅಂದರೆ ಪ್ರಾಸಾ.1 ಮತ್ತು ಪ್ರಾಸಾ.3 ರವರು ಸ್ವತಂತ್ರ ಸಾಕ್ಷಿದಾರರಾಗಿದ್ದು, ಈ ಸಾಕ್ಷಿಗಳ ಮೇಲೆ ಮಾನ್ಯ ಅಭಿಯೋಜನೆಯ ವಾದವು ಅವಲಂಬಿತವಾಗಿರುತ್ತದೆ. ಕಾರಣ, ಪ್ರಾಸಾ.1 ಮತ್ತು ಪ್ರಾಸಾ.3 ರವರು ಸ್ವತಂತ್ರ ಸಾಕ್ಷಿಯಾಗಿದ್ದು, ಹೆಚ್ಚಿನ ಮಹತ್ವ ನೀಡುವಂತಹ ಸಾಕ್ಷಿಯಾಗಿರುತ್ತಾರೆ. ಒಂದು ಪಕ್ಷದಲ್ಲಿ, ಈ ಸಾಕ್ಷಿ ಅಭಿಯೋಜನೆಯ ಪ್ರಕರಣವನ್ನು ಬೆಂಬಲಿಸುವಂತೆ ಸಾಕ್ಷ್ಯ ನೀಡಿದ್ದರೆ, ಉಳಿದ ಸಾಕ್ಷಿಗಳಾದ ಪ್ರಾಸಾ.2, 4 ಮತ್ತು 5 ರವರಿಗೆ ಪ್ರಾಮುಖ್ಯತೆಯನ್ನು ನೀಡಬಹುದು. ಅಂದರೆ, ಉಳಿದ ಸಾಕ್ಷಿಗಳಾದ ಪ್ರಾಸಾ.2, 4 ಮತ್ತು 5 ರವರ ಸಾಕ್ಷ್ಯವು ಈ ಸಾಕ್ಷಿಗಳ ಸಾಕ್ಷ್ಯದ ಮೇಲೆ ಅವಲಂಬಿತವಾಗಿದೆ. ಪಂಚ ಸಾಕ್ಷಿಗಳು ಆರೋಪಿ ವಿರುದ್ದ ಸಾಕ್ಷ್ಯ ನೀಡಿದ್ದರೆ, ಆರೋಪಿ ಅಪರಾಧ

ಮಾಡಿರುತ್ತಾರೆಂದು ಪರಿಗಣಿಸಬಹುದು. ಈ ಹಿನ್ನೆಲೆಯಲ್ಲಿ, ಈ ಸಾಕ್ಷಿಗಳ ಸಾಕ್ಷ್ಯವನ್ನು ಪರಿಗಣಿಸಿದಾಗ, ಪೊಲೀಸರು ತಮ್ಮ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಹಾಗೂ ಸಹಿ ಮಾಡಿರುವ ದಾಖಲೆಗಳಲ್ಲಿ ಬರೆದಿರುವ ಅಂಶಗಳು ತಮ್ಮಗೆ ಗೊತ್ತಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಹಾಗಾಗಿ ಈ ಸಾಕ್ಷಿಗಳನ್ನು ಮಾನ್ಯ ಅಭಿಯೋಜನೆಯು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿರುತ್ತಾರೆ. ಆದರೆ ತಮಗೆ ಪೂರಕವಾದಂತಹ ಸಾಕ್ಷ್ಯವನ್ನು ಪಡೆದುಕೊಳ್ಳಲು ವಿಫಲರಾಗಿರುತ್ತದೆ. ತಾವು ನೀಡಿದೆ ಎಂದು ಹೇಳಲಾದ ಹೇಳಿಕೆಯನ್ನು ಓದಿ ಹೇಳಿದರೂ ಕೂಡ ಅದನ್ನು ನಿರಾಕರಿಸುತ್ತಾ ಅಲ್ಲಗಳೆದಿರುತ್ತಾರೆ, ಹಾಗಾಗಿ ಈ ಸಾಕ್ಷಿಗಳು ಅಭಿಯೋಜನೆಯವರ ವಾದದಂತೆ ಸಾಕ್ಷಿ ನುಡಿದಿರುವುದಿಲ್ಲ.

**15.** ಮೇಲೆ ಹೇಳಿದ ಹಾಗೆ, ಆರೋಪಿ ಕೃತ್ಯ ಮಾಡಿರುತ್ತಾರೆಂದು ಹೇಳುವ ಸಮಯ ಪ್ರಾಸಾ.2, 4 ಮತ್ತು 5 ರವರು ತಮ್ಮ ಸಹೋದ್ಯೋಗಿಗಳೊಂದಿಗೆ ದಾಳಿ ನಡೆಸಿದಾಗ ಆರೋಪಿ ಬಳಿ ಯಾವುದೇ ಪರವಾನಿಗೆ ಇಲ್ಲದೇ ಅಕ್ರಮ ಮದ್ಯ ತುಂಬಿದ ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಟೆಟ್ರಾ ಪ್ಯಾಕ್ ಗಳನ್ನು ಸ್ವಾದೀನ ಹೊಂದಿರುತ್ತಾರೆಂದು ವಾದವಿರುತ್ತದೆ. ಆದರೆ ಸದರಿ ವಾದವನ್ನು ಪುಷ್ಟೀಕರಿಸಲು ಅಭಿಯೋಜನೆಗೆ ಪ್ರಾಸಾ.2, 4 ಮತ್ತು 5 ರವರನ್ನು ಹೊರತುಪಡಿಸಿ, ಮಹಜರ್ ಸಾಕ್ಷಿಯಾದ ಪ್ರಾಸಾ.1 ಮತ್ತು ಪ್ರಾಸಾ.3 ರವರು ಅಭಿಯೋಜನೆಯ ಪರವಾಗಿ ಸಾಕ್ಷ್ಯ ನೀಡಿರುವುದಿಲ್ಲ. ಆದ್ದರಿಂದ ಆರೋಪಿ ಅಪರಾಧ ಮಾಡಿರುತ್ತಾರೆಂದು ರುಜುವಾತುಪಡಿಸಲು ಯಾವುದೇ ಸಮ್ಮತವಾದ ಸಾಕ್ಷ್ಯ ಕಂಡುಬರುತ್ತಿಲ್ಲ.

**16.** ಆದಾಗ್ಯೂ, ಘಟನೆ ನಡೆದ ಆಸು-ಪಾಸಿನಲ್ಲಿರುವ ವ್ಯಕ್ತಿಗಳನ್ನು ಸಾಕ್ಷಿಯಾಗಿ ಮಂಡಿಸಿರುವುದಿಲ್ಲ ಹಾಗೂ ಯಾವ ಕಾರಣಕ್ಕಾಗಿ ಅವರನ್ನು ಸಾಕ್ಷಿಯಾಗಿ ಮಂಡಿಸಿರುವುದಿಲ್ಲವೆಂದು ಸಮಂಜಸವಾದ ಉತ್ತರವನ್ನು ಸಹ ನೀಡಿರುವುದಿಲ್ಲ. ಎಲ್ಲಾ ಟೆಟ್ರಾ ಪ್ಯಾಕ್ ಗಳನ್ನು ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದಿದ್ದರೂ ಸಹ ಕೇವಲ 30 ಟೆಟ್ರಾ ಪ್ಯಾಕೇಟಗಳನ್ನು ಮಾತ್ರ ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದು ಕಳುಹಿಸಿರುವುದಾಗಿ ನುಡಿದಿರುತ್ತಾರೆ. ಸ್ಥಳ ಮಹಜರ್ ಮಾಡುವ ಕಾಲಕ್ಕೆ ಯಾವ ಕಾರಣಕ್ಕೆ ಭಾವ ಚಿತ್ರ ತೆಗೆದಿಲ್ಲ ಎಂಬುದನ್ನು ಹಾಗೂ ವಾಹನದ ಫೋಟೋವನ್ನು ತೆಗೆದಿಲ್ಲ ಎಂಬುದನ್ನು ತಿಳಿಸಿರುವುದಿಲ್ಲ. ಹೀಗಿರುವಾಗ ಕೇವಲ ಪ್ರಾಸಾ.2, 4 ಮತ್ತು ಪ್ರಾಸಾ.5 ರವರು ಆರೋಪಿಯು ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ ಟೆಟ್ರಾ ಪ್ಯಾಕ್ ಗಳನ್ನು ಸ್ವಾದೀನ ಹೊಂದಿ ಸಾಗಾಣಿಕೆ ಮಾಡುತ್ತಿರುತ್ತಾರೆಂದು ಪರಿಗಣಿಸುವುದು ಸಮಂಜಸವಲ್ಲವೆಂದು ಭಾವಿಸಲಾಗಿದೆ. ಹಾಗಾಗಿ ಮೇಲೆ ವಿವರಿಸಿದ ಕಾರಣಗಳಿಂದ, ಆರೋಪಿ ಮೇಲೆ ಎಸಗಿರುವ ಆರೋಪಣೆಯನ್ನು ರುಜುವಾತುಪಡಿಸಲು ಅಭಿಯೋಜನೆಯು ವಿಫಲರಾಗಿರುತ್ತದೆ ಎಂದು ಪರಿಗಣಿಸಿ, **ಅಂಶ.1** ನ್ನು ಈ ನ್ಯಾಯಾಲಯವು **ನಕಾರಾತ್ಮಕವಾಗಿ** ಉತ್ತರಿಸಿರುತ್ತದೆ.

**17. ಅಂಶ ನಂ.2:-** ಅಂಶ-1 ರಲ್ಲಿ ವಿವರಿಸಿದ ಕಾರಣದಿಂದ ಅಭಿಯೋಜನೆಯು ಆರೋಪಿ ಮೇಲೆ ಮಾಡಿದ ಆರೋಪಣೆಯನ್ನು ಸಾಭೀತು ಮಾಡಲು ವಿಫಲರಾಗಿರುತ್ತದೆ ಎಂದು ತೀರ್ಮಾನಿಸುತ್ತಾ ಈ ಕೆಳಗಿನಂತೆ.

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1)ರಡಿಯಲ್ಲಿ, ಆರೋಪಿಯನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ. 11, 13(1)(ಎ), 14, 32(1), 38(ಎ) ಮತ್ತು 43(ಎ) ರಡಿಯಲ್ಲಿ ಆರೋಪಿಸಲಾದ ಶಿಕ್ಷಾರ್ಹ ಆರೋಪಗಳಿಂದ ದೋಷಮುಕ್ತರೆಂದು ಪರಿಗಣಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿ ದಂಡ ಪ್ರಕ್ರಿಯಾ ಸಂಹಿತೆ ಕಲಂ.437(ಎ) ರಡಿ ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳನ್ನು ಮತ್ತು ಸ್ವಂತ ಮುಚ್ಚಳಿಕೆಯು 6 ತಿಂಗಳ ವರೆಗೆ ಚಾಲ್ತಿಯಲ್ಲಿರುತ್ತದೆ.

ಮುದ್ದೆಮಾಲು-1 ರಲ್ಲಿರುವ ಮದ್ಯದ ಟೆಟ್ರಾ ಪ್ಯಾಕ್ ಗಳು ಮತ್ತು ಮು ಮಾ -2 ಮತ್ತು 3 ರಟ್ಟಿನ ಪೆಟ್ಟಿಗೆಗಳು ಮೌಲ್ಯರಹಿತವಾಗಿದ್ದು, ಅವುಗಳನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಕಚೇರಿಗೆ ಆದೇಶಿಸಿದೆ.

(ಶೀಘ್ರಲಿಪಿಗಾರರಿಗೆ ಗಣಕಯಂತ್ರದಲ್ಲಿ ನೇರವಾಗಿ ಉಕ್ತಲೇಖನ ನೀಡಿ, ಅದನ್ನು ಓದಿ ತಿದ್ದುಪಡಿ ಮಾಡಿ ನಂತರ ತೆರೆದ ನ್ಯಾಯಾಲಯದಲ್ಲಿ ದಿನಾಂಕ 2 ನೇ **ಏಪ್ರಿಲ್** ಮಾಹೆ 2026 ರಂದು ಘೋಷಿಸಲಾಯಿತು)

Digitally signed by SHWETHA JANARDHAN
Location: I Addl.Civil Judge and JMFC., Periyapatna

**(ಶ್ವೇತ.ಜೆ)**

**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,**
**ಪಿರಿಯಾಪಟ್ಟಣ.**

**-: ಅನುಬಂಧ :-**

**ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿದಾರರುಗಳ ಪಟ್ಟಿ**

ಪ್ರಾಸಾ.1 - ಸಂಜು

ಪ್ರಾಸಾ.2 - ಕುಮಾರ. ಹೆಚ್.ಜಿ

ಪ್ರಾಸಾ.3 - ನಂಜುಂಡ ಆರಾಧ್ಯ

ಪ್ರಾಸಾ.4 - ಸುಧಾರಾಣಿ

ಪ್ರಾಸಾ.5 - ಧರ್ಮರಾಜು

**ಅಭಿಯೋಜನೆ ಪರ ನಿಶಾನೆಯಾಗಿ ಗುರುತಿಸಲ್ಪಟ್ಟ ದಾಖಲಾತಿಗಳ ವಿವರಃ**

| | | |
|---|---|---|
| ನಿಪಿ.1 | - | ಸ್ಥಳ ಮಹಜರ್ |
| ನಿಪಿ.1(ಎ) | - | ಪ್ರಾಸಾ.1 ರವರ ಸಹಿ |
| ನಿಪಿ.1(ಬಿ) | - | ಪ್ರಾಸಾ.2 ರವರ ಸಹಿ |
| ನಿಪಿ.1(ಸಿ) | - | ಪ್ರಾಸಾ.3 ರವರ ಸಹಿ |
| ನಿಪಿ.1(ಡಿ) | - | ಪ್ರಾಸಾ.4 ರವರ ಸಹಿ |
| ನಿಪಿ.2 | - | ಶೋಧನ ಸಮುಚಿತ ಆಧಾರ |
| ನಿಪಿ.2(ಎ) | - | ಪ್ರಾಸಾ.1 ರವರ ಸಹಿ |
| ನಿಪಿ.2(ಬಿ ) | - | ಪ್ರಾಸಾ.3 ರವರ ಸಹಿ |
| ನಿಪಿ.2(ಸಿ) | - | ಪ್ರಾಸಾ.4 ರವರ ಸಹಿ |
| ನಿಪಿ.3 | - | ಮಾಲುಪಟ್ಟಿ |
| ನಿಪಿ.3(ಎ) | - | ಪ್ರಾಸಾ.1 ರವರ ಸಹಿ |
| ನಿಪಿ.3(ಬಿ) | - | ಪ್ರಾಸಾ.3 ರವರ ಸಹಿ |
| ನಿಪಿ.3(ಸಿ) | - | ಪ್ರಾಸಾ.4 ರವರ ಸಹಿ |
| ನಿಪಿ.4 | - | ಮಾದರಿ ಸೀಲು |
| ನಿಪಿ.4(ಎ) | - | ಪ್ರಾಸಾ.1 ರವರ ಸಹಿ |
| ನಿಪಿ.4(ಬಿ) | - | ಪ್ರಾಸಾ.2 ರವರ ಸಹಿ |
| ನಿಪಿ.4(ಸಿ) | - | ಪ್ರಾಸಾ.4 ರವರ ಸಹಿ |
| ನಿಪಿ.5 | - | ಪ್ರಾಸಾ.1 ರವರ ಹೇಳಿಕೆ |
| ನಿಪಿ.6 | - | ಪ್ರಾಸಾ.3 ರವರ ಹೇಳಿಕೆ |
| ನಿಪಿ.7 | - | ಸ್ವವರದಿ |
| ನಿಪಿ.7(ಎ) | - | ಪ್ರಾಸಾ.4 ರವರ ಸಹಿ |
| ನಿಪಿ.8 | - | ಪ್ರಥಮ ವರ್ತಮಾನ ವರದಿ |
| ನಿಪಿ.8(ಎ) | - | ಪ್ರಾಸಾ.4 ರವರ ಸಹಿ |
| ನಿಪಿ.8 | - | ಬಿ ಎಕ್ಸಾಟ್ರಾಕ್ಟ |

| | | |
|---|---|---|
| ನಿಪಿ.9 | - | ಮನವಿ ಪತ್ರ |
| ನಿಪಿ.9(ಎ) | - | ಪ್ರಾಸಾ.5 ರವರ ಸಹಿ |
| ನಿಪಿ.10 | - | ಮನವಿ ಪತ್ರ |
| ನಿಪಿ.10(ಎ) | - | ಪ್ರಾಸಾ.5 ರವರ ಸಹಿ |
| ನಿಪಿ.11 | - | ವಾಹನದ ಬಿ ಎಕ್ಸಟ್ರಾಕ್ಟ |
| ನಿಪಿ.11(ಎ) | - | ಪ್ರಾಸಾ.5 ರವರ ಸಹಿ |
| ನಿಪಿ.12 | - | ಚಾಸಾ.9 ರವರಿಗೆ ನೀಡಿದ ಕಾರಣ ಕೇಳಿ ನೋಟೀಸ್ |
| ನಿಪಿ.12(ಎ) | - | ಪ್ರಾಸಾ.5 ರವರ ಸಹಿ |
| ನಿಪಿ.13 | - | ಚಾಸಾ,9 ರವರು ನೀಡಿದ ಸಮಜಾಯಿಸಿ |
| ನಿಪಿ.13(ಎ) | - | ಪ್ರಾಸಾ.5 ರವರ ಸಹಿ |
| ನಿಪಿ.14 | - | ಚಾಸಾ.9 ರವರ ಮುಚ್ಚಳಿಕೆ ಪತ್ರ |

**ಆರೋಪಿ ಪರ ವಿಚಾರಿಸಲ್ಪಟ್ಟ ಸಾಕ್ಷಿದಾರರು ಮತ್ತು ನಿಶಾನೆಯಾಗಿ ಗುರುತಿಸಲ್ಪಟ್ಟ ದಾಖಲಾತಿಗಳು -ಇಲ್ಲ -**

**ಅಭಿಯೋಜನೆ ಪರವಾಗಿ ಗುರುತಿಸಲಾದ ಮುದ್ದೆಮಾಲುಗಳು**

ಮುದ್ದೆ ಮಾಲು.1 - ಟೆಟ್ರಾ ಪ್ಯಾಕೇಟ್‌ಗಳು
ಮುದ್ದೆ ಮಾಲು.2 ಮತ್ತು 3- ರಟ್ಟಿನ ಪೆಟ್ಟಿಗೆಗಳು

Digitally signed by SHWETHA JANARDHAN
Location: I Addl.Civil Judge and JMFC., Periyapatna

**(ಶ್ವೇತ.ಜೆ)**

**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,**

**ಪಿರಿಯಾಪಟ್ಟಣ**